ಇ) ಗುರಿಯನ್ನು ಸಾಧಿಸಲು ಯಾವುದೇ ಅಡೆತಡೆಗಳು ಇರುವುದಿಲ್ಲ.

ಈ) ಗುರಿಗೆ ಅನುಗುಣವಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಸಾಧಿಸಿದ ಪ್ರಗತಿಗೆ ಅನುಗುಣವಾಗಿ ಪ್ರತಿವಾರ ನೇರವಾಗಿ 'Internet Banking' ಮೂಲಕ ಗ್ರಾಮ ಪಂಚಾಯತಿ ಮನೆಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ. ಈ ಎಲ್ಲಾ ಮನೆಗಳನ್ನು ಈ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ) :-

1063 (518) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

1) ಬೀಳಗಿ ಮತಕ್ಷೇತ್ರದಲ್ಲಿ ಈಗಿರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು;

2) 2006-07, 2007-08ರಲ್ಲಿ ಹೊಸದಾಗಿ ಮಂಜೂರು ಮಾಡಿದ ಪ್ರೌಢಶಾಲೆಗಳೆಷ್ಟು;

3) ಪ್ರೌಢಶಾಲೆ ಮಂಜೂರು ನೀಡಿಕೆಯಲ್ಲಿ ಜನ ಸಂಖ್ಯೆ/ಗ್ರಾಮ ಪಂಚಾಯಿತಿಗೊಂದು/ಪ್ರೌಢಶಾಲೆಯಿಂದ ಪ್ರೌಢಶಾಲೆಗೆ ಇರುವ ದೂರ/ಪುನರ್ವಸತಿ ಕೇಂದ್ರ ಇವುಗಳ ಅಂತರವನ್ನು ಮಾನದಂಡವಾಗಿ ಪರಿಗಣಿಸುವುದಿಲ್ಲವೆ;

4) 10 ಸಾವಿರ ಜನ ಸಂಖ್ಯೆ ಇರುವ ಸಮೀಪದಲ್ಲಿ ಸರ್ಕಾರದ ಪ್ರೌಢಶಾಲೆ ಇಲ್ಲದಿರುವ ಜಮಖಂಡಿ ತಾಲ್ಲೂಕಿನ ಬೀಳಗಿ ಮತಕ್ಷೇತ್ರಕ್ಕೊಳಪಟ್ಟ **"ಕೊಣ್ಣೂರ"** ಗ್ರಾಮಕ್ಕೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :-

1) 22 ಪ್ರೌಢಶಾಲೆಗಳಿವೆ.

2) ರಾಜ್ಯದಲ್ಲಿ 2006-07ರಲ್ಲಿ 485 ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಿದೆ. ರಾಜ್ಯದಲ್ಲಿ 2007-08ರಲ್ಲಿ 199 ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಿದೆ.

3) ಆಯವ್ಯಯದಲ್ಲಿ ಲಭ್ಯವಿರುವ ಅವಕಾಶದಂತೆ ಹಾಗೂ ಸ್ಥಳೀಯ ಅಗತ್ಯತೆಗಳನ್ನು ಪರಿಗಣಿಸಿ ಹಂತ ಹಂತವಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಇದೊಂದು ಸತತವಾದ ಪ್ರಕ್ರಿಯೆಯಾಗಿದೆ.